# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ


## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

### ಹವಾಮಾನ ಮುನ್ಸೂಚನೆಯ ಅವಧಿ 18-09-2024 ರಿಂದ 22-09-2024

ಸಂ. ಗ್ರಾ.ಕೃ.ಹ.ಸೇ.ಬ/057/2024 ದಿನಾಂಕ: 17.09.2024

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 18-09-2024 ರಿಂದ 22-09-2024 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೂಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (18.09.2024) | ದಿನ–2 (19.09.2024) | ದಿನ–3 (20.09.2024) | ದಿನ–4 (21.09.2024) | ದಿನ–5 (22.09.2024) | | |
| ಮಳೆ ಪ್ರಮಾಣ (ಮಿ.ಮೀ.) | 15 | 17 | 10 | 10 | 15 | 53.4 | 67↑ |
| ಗರಿಷ್ಠ ಉಷ್ಣಾಂಶ (°C) | 31.6 | 31.7 | 32.9 | 32.5 | 32.7 | 31.5 | 32.3↑ |
| ಕನಿಷ್ಠ ಉಷ್ಣಾಂಶ (°C) | 19 | 17.1 | 17 | 17.9 | 17.9 | 17.4 | 17.8↑ |
| ಮೋಡದ ಹೊದಿಕೆ (ಒಕ್ಟಾ) | 3 | 1 | 1 | 2 | 6 | 6 | 3↓ |
| ಗರಿಷ್ಠ ಆರ್ದ್ರತೆ (ಶೇ.) | 94 | 94 | 94 | 94 | 95 | 85.6 | 94.2↑ |
| ಕನಿಷ್ಠ ಆರ್ದ್ರತೆ (ಶೇ.) | 60 | 60 | 54 | 58 | 58 | 67.4 | 58↓ |
| ಗಾಳಿಯ ವೇಗ (Kmph) | 7 | 6 | 6 | 6 | 6 | 6.4 | 6.2↓ |
| ಗಾಳಿಯ ದಿಕ್ಕು (°) | 153 | 117 | 248 | 248 | 251 | 92 | 203↑ |
| ಮುನ್ಸೂಚನೆ | NIL | NIL | NIL | NIL | NIL | | |
| ಸಂಭವನೀಯತೆ (%) | 25-50 | 25-50 | 1-25 | 1-25 | 25-50 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 22.09.2024 ರಿಂದ 28.09.2024 ರವರೆಗೆ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ


ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಭಾಗಶ: ಮೋಡಕವಿದ ವಾತಾವರಣವಿರಲಿದ್ದು ಜಿಲ್ಲೆಯಾದ್ಯಂತ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **31.6-32.9°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **17.0-19.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **94%** ರಿಂದ **95%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **54%** ರಿಂದ **60%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **6-7** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 |
|---|---|---|---|---|---|---|---|---|---|---|---|---|---|
| Rainfall | 3710.5 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3316.6 | 3190.7 |
| Rainy days | 105 | 127 | 112 | 107 | 119 | 121 | 112 | 123 | 126 | 152 | 125 | 105 | 111 |

| Realised Rainfall (29th AUG to 04th SEPT, 2024) | Rainfall Forecast Map (06TH SEPT to 12th SEPT 2024) | Temperature conditional Index Outlook (26.08.2024 to 01.09.2024) | Normalized Difference Vegetation Index |
|---|---|---|---|
|  |  |  |  |

| Warnings for Costal Karnataka | |
|---|---|
| Date of Issue: September 17, 2024 | |
| Day 1:September 17, 2024 | No Warning |
| Day 2: September 18, 2024 | No Warning |
| Day 3: September 19, 2024 | No Warning |
| Day 4: September 20, 2024 | No Warning |
| Day 5: September 21, 2024 | No Warning |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

### ತೋಟಗಾರಿಕೆ ಬೆಳೆಗಳು:

| ಬೆಳೆ | | ಕೃಷಿ ಸಲಹೆಗಳು |
|---|---|---|
| ಅಡಿಕೆ<br>(ಎಲೆ ಚುಕ್ಕಿ ರೋಗ) | ಹೂ ಬಿಡುವ ಹಂತ ಅಥವಾ ಸಿಂಗಾರ ಅರಳುವ ಸಮಯ | ➢ ರೋಗದ ಹತೋಟಿಗಾಗಿ ಹೆಕ್ಸಾಕೊನೊಜೋಲ್ ಅಥವಾ ಪ್ರೋಪಿಕೋನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸುವುದು. |
| ಅಡಿಕೆ<br>(ಪೋಷಕಾಂಶ ನಿರ್ವಹಣೆ) | | ➢ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರ ನೀಡುವ 15–20 ದಿನಗಳ ಮುನ್ನ ಪ್ರತಿ ಅಡಿಕೆ ಮರಕ್ಕೆ(6 ವರ್ಷ ಮೇಲ್ಪಟ್ಟ) 250–300 ಗ್ರಾಂ ನಷ್ಟು ಕೃಷಿ ಸುಣ್ಣವನ್ನು ಹಾಕುವುದು.(ಶಿಫಾರಸ್ಸಿನ ಪ್ರಮಾಣ: 100:40:140 ಗ್ರಾಂ ನಷ್ಟು ಸಾರಜನಕ,ರಂಜಕ ಮತ್ತು ಪೊಟ್ಯಾಷ್ ಪ್ರತಿ ಮರಕ್ಕೆ ಮತ್ತು 50ಕಿ.ಗ್ರಾಂನಷ್ಟು ಕೊಟ್ಟಿಗೆ ಗೊಬ್ಬರ) |
| ಅಡಿಕೆ<br>(ಕಳೆ ನಿರ್ವಹಣೆ) | | ➢ ತೋಟಗಳಲ್ಲಿ ಕಳೆ ನಿರ್ವಹಣೆ/ನಿಯಂತ್ರಣ ಮಾಡಲು ಗ್ಲೈಫೋಸೇಟ್ (ಅಮೋನಿಯಂ ಉಪ್ಪು) 71% ಎಸ್.ಜಿ ಅನ್ನು ಪ್ರತಿ ಲೀಟರ್ ನೀರಿಗೆ 4 ಗ್ರಾಂನಂತೆ ಬೆರಸಿ ಕಳೆಗಳ ಮೇಲೆ ಸಿಂಪಡಿಸುವುದು. ಅಡಿಕೆ ಮರಕ್ಕೆ ಈ ಸಿಂಪರಣೆ ತಗುಲದಂತೆ ಎಚ್ಚರವಹಿಸಿ. |
| ಅಡಿಕೆ<br>(ಸಸಿ ನೆಡುವುದು) | | ➢ ಎತ್ತರ ಪ್ರದೇಶದಲ್ಲಿ ಅಡಿಕೆ ಗಿಡ ನಾಟಿ ಮಾಡಲು ಸೂಕ್ತ ಸಮಯ. ಗಿಡದಿಂದ ಗಿಡಕ್ಕೆ '9 X 9' ಅಡಿ ಅಂತರದಲ್ಲಿ ನಾಟಿ ಮಾಡಬೇಕು.<br>➢ ಅಡಿಕೆ ತೋಟದಲ್ಲಿ ಎರಡು ಸಾಲುಗಳ ಮಧ್ಯದಲ್ಲಿ ತೋಟದ ನೀರು ಬಸಿದು ಹೋಗಲು 2 ಅಡಿ ಆಳದ ಕಾಲುವೆಗಳನ್ನು ತೆಗೆಯಬೇಕು.<br>➢ ಮಣ್ಣು ಪರೀಕ್ಷೆ ಶಿಫಾರಿತ ಪ್ರಮಾಣದ ಸುಣ್ಣವನ್ನು ಮಣ್ಣಿನಲ್ಲಿ ಸೇರಿಸಬೇಕು.<br>➢ '2X2" ಅಡಿ ಗುಂಡಿಯಲ್ಲಿ ಮೇಲ್ಮಣ್ಣು ಮತ್ತು 20ಗ್ರಾಂ ಚೆನ್ನಾಗಿ ಕಳಿತ ಕಾಂಪೋಸ್ಟ್ ಗೊಬ್ಬರದಿಂದ ಗುಂಡಿಯನ್ನು ತುಂಬಿಸಿ ಗಿಡವನ್ನು ನೆಡಬೇಕು. |
| ಅಡಿಕೆ<br>(ಸಾಮಾನ್ಯ ಸಲಹೆ) | | ➢ ತೋಟವನ್ನು ಸ್ವಚ್ಛವಾಗಿ ಇಡುವುದು ಇಲ್ಲವಾದಲ್ಲಿ ಹಲವಾರು ರೋಗ ಮತ್ತು ಕೀಟಗಳ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. |
| ತೆಂಗು<br>(ರೈನೋಸೊರೆಸ್ ದುಂಬಿ) | ಶಾರೀರಿಕ ಪ್ರಬುದ್ಧತೆ | ➢ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ ಗೊಬ್ಬರದ ಹೊಂಡಗಳಿಂದ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಿ<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಹಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯ ಹತ್ತಿರದ ಒಳಗಿನ ಎರಡರಿಂದ ಮೂರು ಎಲೆಗಳ ಸಂದುಗಳಲ್ಲಿ 100 ಗ್ರಾಂ ಬೇವಿನ ಬೀಜದ ಪುಡಿ ಅಥವಾ 250ಗ್ರಾಂ ಬೇವಿನ ಹಿಂಡಿಯ ಪುಡಿ ಅಥವಾ 20ಗ್ರಾಂ ಕಾರ್ಟಾಪ್‌ಹೈಡ್ರೋಕ್ಲೋರೈಡ್ 4ಜಿ ಅಥವಾ 20ಗ್ರಾಂ ಫಿಪ್ರೋನಿಲ್ 0.3ಜಿ ಯನ್ನು 100ಗ್ರಾಂ ಮರಳಿನೊಂದಿಗೆ ಬೆರಸಿ ಜನವರಿ,ಮೇ ಮತ್ತು ಸೆಪ್ಟಂಬರ್ ತಿಂಗಳಿನಲ್ಲಿ ಇಡಬೇಕು ಅಥವಾ ಮರಳು ಹೊರತುಪಡಿಸಿ ಮೇಲೆ ತಿಳಿಸಿದ ಕೀಟನಾಶಕಗಳನ್ನು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸಣ್ಣ ರಂಧ್ರಗಳುಳ್ಳ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಸುಳಿಯ ಹತ್ತಿರವಿರುವ ಗರಿಗಳ ಸಂದುಗಳಲ್ಲಿ ಇಡಬೇಕು.<br>➢ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ (1ಮಿ.ಲೀ) ಅಥವಾ ಸೈನೋಸ್ಪೈಡ್ 25 ಎಸ್.ಸಿ |

| | | |
|---|---|---|
| | | (5ಮಿ.ಲೀ) ಅಥವಾ ಇ0ಡಾಕ್ಸಿಕಾರ್ಬ 14.5 ಇ.ಸಿ (25 ಮಿ.ಲೀ) ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ 1–2 ಲೀಟರ್ ದ್ರಾವಣವನ್ನು ಸುಳಿಯ ಬುಡಕ್ಕೆ ಸುರಿಯಬೇಕು.<br>➢ ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅರ್ಧ ಹೇಕ್ಟರ್‌ಗೆ ಅಳವಡಿಸುವುದು. |
| **ತೆಂಗು**<br>**(ಕಾಂಡ ಸೋರುವ ರೋಗ)** | | ➢ ಕಾಂಡ ಸೋರುವ ರೋಗ ನಿಯಂತ್ರಣ ಮಾಡಲು ರೈತರು ಕಾಂಡ ಭಾಗವನ್ನು ಕೆತ್ತಿದ ನಂತರ ಶೇಕಡ 1ರ ಬೋರ್ಡೋ ಪೇಸ್ಟನ್ನು ಹಚ್ಚಬೇಕು ಅಥವಾ 2 ಮಿ.ಲೀ ಹೆಕ್ಸಾಕೊನಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡಕ್ಕೆ ಸುರಿಯುವುದು (ಪ್ರತಿ ಮರಕ್ಕೆ 3ಲೀಟರ್) ಅದರ ಜೊತೆಗೆ ಪ್ರತಿ ಗಿಡಕ್ಕೆ 5 ಕಿ.ಗ್ರಾಂ ಅಷ್ಟು ಬೇವಿನ ಹಿಂಡಿಯನ್ನು ನೀಡುವುದು. |
| **ತೆಂಗು**<br>(ಕಳೆ ನಿರ್ವಹಣೆ) | | ➢ ತೋಟಗಳಲ್ಲಿ ಕಳೆ ನಿರ್ವಹಣೆ/ನಿಯಂತ್ರಣ ಮಾಡಲು ಗ್ಲೈಫೋಸೇಟ್ (ಅಮೋನಿಯಂ ಉಪ್ಪು) 71% ಎಸ್.ಜಿ ಅನ್ನು ಪ್ರತಿ ಲೀಟರ್ ನೀರಿಗೆ 4 ಗ್ರಾಂನಂತೆ ಬೆರಸಿ ಕಳೆಗಳ ಮೇಲೆ ಸಿಂಪಡಿಸುವುದು. ಅಡಿಕೆ ಮರಕ್ಕೆ ಈ ಸಿಂಪರಣೆ ತಗುಲದಂತೆ ಎಚ್ಚರವಹಿಸಿ. |
| **ತೆಂಗು**<br>(ಸಸಿ ನೆಡುವುದು) | | ➢ ಎತ್ತರ ಪ್ರದೇಶದಲ್ಲಿ ತೆಂಗು ಗಿಡ ನಾಟಿ ಮಾಡಲು ಸೂಕ್ತ ಸಮಯ. 2.5x3.0 ಅಡಿ ಉದ್ದ, ಅಗಲ ಮತ್ತು ಆಳದ ಗುಂಡಿಯನ್ನು ನಿರ್ಮಿಸಿ.<br>➢ ಅದಕ್ಕೆ ಹಟ್ಟಿ ಗೊಬ್ಬರ, ಮೇಲ್ಮಣ್ಣು ಹಾಗೂ 20 ಗ್ರಾಂ. ಫೋರೇಟ್ ಮಿಶ್ರಣವನ್ನು ಬೆರೆಸಿ.<br>➢ ಆಯ್ಕೆ ಮಾಡಿದ ಸಸಿಗಳನ್ನು ಗುಂಡಿಯ ಮಧ್ಯಭಾಗದಲ್ಲಿ ನಾಟಿ ಮಾಡಿ ಆಧಾರವನ್ನು ನೀಡಬೇಕು.<br>➢ ಹೆಚ್ಚು ಮಳೆ ಬೀಳುವ ಜಾಗದಲ್ಲಿ ಗಿಡಗಳ ಬುಡದಲ್ಲಿ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. |
| **ತೆಂಗು**<br>(ಪೋಷಕಾಂಶ ನಿರ್ವಹಣೆ) | | ➢ ಶಿಫಾರಸ್ಸಿನ ಪ್ರಮಾಣದ ರಾಸಾಯನಿಕ ಗೊಬ್ಬರ ನೀಡುವ 15–20 ದಿನಗಳ ಮುನ್ನ ಪ್ರತಿ ತೆಂಗಿನ ಮರಕ್ಕೆ(6 ವರ್ಷ ಮೇಲ್ಪಟ್ಟ) 2 ಕಿ.ಗ್ರಾಂ ನಷ್ಟು ಕೃಷಿ ಸುಣ್ಣವನ್ನು ಹಾಕುವುದು.(ಶಿಫಾರಸ್ಸಿನ ಪ್ರಮಾಣ: 300:200:800 ಗ್ರಾಂ ನಷ್ಟು ಸಾರಜನಕ,ರಂಜಕ ಮತ್ತು ಪೊಟ್ಯಾಷ್ ಪ್ರತಿ ಮರಕ್ಕೆ ಮತ್ತು 50ಕಿ.ಗ್ರಾಂನಷ್ಟು ಕೊಟ್ಟಿಗೆ ಗೊಬ್ಬರ) |
| **ಗೇರು**<br>(ಎಲೆಕೊಳೆ ರೋಗ) | ಸಸ್ಯಕ ಹಂತ | ➢ ಈ ರೋಗವನ್ನು ನಿಯಂತ್ರಣ ಮಾಡಲು ಕಾಪರ್ ಆಕ್ಸಿಕ್ಲೋರೈಡ್ ಅನ್ನು ಪ್ರತಿ ಲೀಟರ್ ನೀರಿಗೆ 3 ಗ್ರಾಂನಷ್ಟು ಮಿಶ್ರಿಸಿ ಸಿಂಪಡಿಸುವುದು ಸೂಕ್ತ |
| **ಗೇರು**<br>(ಪೋಷಕಾಂಶ ನಿರ್ವಹಣೆ) | | ➢ ರೈತರು ಶಿಫಾರಸ್ಸಿನ ಪ್ರಮಾಣದ ಗೊಬ್ಬರ ನೀಡುವ 15 ದಿನಗಳ ಮೊದಲು ಪ್ರತಿ ಎಕರೆಗೆ 200 ಕಿ.ಗ್ರಾಂ ಕೃಷಿ ಸುಣ್ಣವನ್ನು ಹಾಕುವುದು ಸೂಕ್ತ<br>➢ ರೈತರು 60:60:60 ಗ್ರಾಂ, 125:125:125 ಗ್ರಾಂ, 250:125:125 ಗ್ರಾಂ, 500:125:125 ಗ್ರಾಂ ಹಾಗೂ 500:250:250 ಗ್ರಾಂ ನಷ್ಟು ಸಾರಜನಕ/ರಂಜಕ/ಪೊಟ್ಯಾಷ್ ಅನ್ನು 1ನೇ ವರ್ಷದ, 2ನೇ ವರ್ಷದ,3ನೇ ವರ್ಷದ,4 ರಿಂದ 8ನೇ ವರ್ಷದ ಮತ್ತು 9ನೇ ವರ್ಷದ ಮೇಲ್ಪಟ್ಟ ಗಿಡಗಳಿಗೆ ಹಾಕುವುದು ಸೂಕ್ತವಾಗಿದೆ. |
| **ಮಲ್ಲಿಗೆ**<br>(ಎಲೆಚುಕ್ಕೆ ರೋಗ) | ಸಸ್ಯಕ ಹಂತ | ➢ ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ ಅಥವಾ ಪ್ರೋಫಿಕೋನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಿಸಿ |
| **ಮಲ್ಲಿಗೆ**<br>(ಸಾಮಾನ್ಯ ಸಲಹೆ) | | ➢ ರೈತರು ಬೇಸಿಗೆಯಲ್ಲಿ ಗಿಡದ ಬುಡದಲ್ಲಿ ನೀರು ನಿಲ್ಲುವಂತೆ ಪಾತಿ ಮಾಡಿರುತ್ತಾರೆ. ಮಳೆಗಾಲದಲ್ಲಿ ಆ ಪಾತಿಯಲ್ಲಿ ನೀರು ನಿಲ್ಲದಂತೆ ಒಡೆದು ಕೊಡಬೇಕು, ಇಲ್ಲವಾದಲ್ಲಿ ಸೊರಗು ರೋಗ ಬರುವ ಸಂಭವವಿರುತ್ತದೆ. |
| **ಕಾಳುಮೆಣಸು**<br>(ನಿಧಾನ ಸೊರಗು ರೋಗ) | ಹೂ ಬಿಡುವ ಹಂತ | ➢ ಮುಂಜಾಗ್ರತಾ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 2 ಗ್ರಾಂ ಮೆಟಲಾಕ್ಸಿಲ್ + ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು ಅಥವಾ ಸಿಂಪಡಿಸುವುದು. |
| **ಕಾಳುಮೆಣಸು**<br>(ಸಾಮಾನ್ಯ ಸಲಹೆ) | | ➢ ಉತ್ತಮ ಇಳುವರಿ ಪಡೆಯಲು ಪೆಪ್ಪರ್ ಸ್ಪೆಷಲ್ ಅನ್ನು 5 ಗ್ರಾಂನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು |
| **ತೋಟಗಾರಿಕೆ ಬೆಳೆಗಳು**<br>(ಸಾಮಾನ್ಯ ಸಲಹೆ) | ******** | ➢ ತೋಟಗಾರಿಕೆ ಬೆಳೆಗೆ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಒದಗಿಸುವುದು: 4ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರದ ಜೊತೆಗೆ 1 ಕಿ.ಗ್ರಾಂ ಬೆಲ್ಲವನ್ನು 200ಲೀ. ನೀರಿನಲ್ಲಿ ಮಿಶ್ರಣ ಮಾಡಿಕೊಳ್ಳಬೇಕು. ಅಡಿಕೆ ಬೆಳೆಗೆ 2–3 ಲೀ. ತೆಂಗು ಬೆಳೆಗೆ 5–6ಲೀ. ಮತ್ತು ಕಾಳುಮೆಣಸಿನ ಬಳ್ಳಿಗೆ 2ಲೀಟರ್ ನಷ್ಟು ಗಿಡದ ಬುಡದ ಭಾಗಕ್ಕೆ ನೇರವಾಗಿ ಸುರಿಯಬೇಕು ಅಥವಾ ಶೋಧಿಸಿದ ನಂತರ ಹನಿ ನೀರಾವರಿ ಮೂಲಕ ಕೊಡಬಹುದು ಹಾಗೂ ಇತರೆ |

| | | |
|---|---|---|
| | | ಎಲ್ಲಾ ತರಕಾರಿ ಬೆಳೆಗಳಿಗೆ ಮತ್ತು ಹೂವಿನ ಬೆಳೆಗಳಿಗೆ, ಬೆಳೆಯ ವಯಸ್ಸಿನ ಆಧಾರದ ಮೇಲೆ ಬಳಸಬಹುದು ಅಥವಾ 400 ಕಿ.ಗ್ರಾಂ ಚೆನ್ನಾಗಿ ಕಳಿತ ಹಟ್ಟಿ ಗೊಬ್ಬರದೊಂದಿಗೆ 4 ಕಿ.ಗ್ರಾಂ ಸಹ್ಯಾದ್ರಿ ತ್ರಿಶೂಲ್ ಜೈವಿಕ ಗೊಬ್ಬರವನ್ನು ಮಿಶ್ರಣ ಮಾಡಿ 10-15 ದಿನಗಳ ನಂತರ ಬೆಳೆಗಳಿಗೆ ಒದಗಿಸುವುದು. |

## ಕ್ಷೇತ್ರ ಬೆಳೆಗಳು:

| | | |
|---|---|---|
| ಭತ್ತ (ಎರಡನೇಯ ಮೇಲು ಗೊಬ್ಬರ) | ಹೂಬಿಡುವ ಹಂತ | ಮೊದಲ ಹಂತದ ಮೇಲುಗೊಬ್ಬರ ನೀಡಿದ ನಂತರ ಕಳೆ ನಿಯಂತ್ರಣ ಮಾಡುವುದು ತದನಂತರ ಎರಡನೇ ಹಂತದ ಮೇಲು ಗೊಬ್ಬರವಾಗಿ 17.5 ಕೆ.ಜಿ ಯೂರಿಯಾ ಮತ್ತು 13.5 ಕೆ.ಜಿ ಪೊಟ್ಯಾಷ್ ನೀಡುವುದು. |
| ಭತ್ತ (ಎಲೆ ಮಡಿಸುವ ಹುಳು) | | ➢ ಗದ್ದೆಯ ಬದುಗಳನ್ನು ಸ್ವಚ್ಛವಾಗಿಡುವುದು ಸೂಕ್ತ ಹಾಗೂ ಕ್ವಿನೋಲೊಫಾಸ್ 25 ಇ.ಸಿ ಯನ್ನು 2 ಮಿ.ಲೀ ನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಅಥವಾ ಕ್ಲೋರೋಫೈರಿಫಾಸ್ 20 ಇ.ಸಿ ಯನ್ನು 2ಮಿ.ಲೀ ನಂತೆ ಲೀಟರ್ ನೀರಿಗೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಅಥವಾ ಫ್ಲೂಬೆಂಡಿಆಮೈಡ್ 48 ಎಸ್.ಸಿ ಯನ್ನು 0.08 ಗ್ರಾಂ ನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಅಥವಾ ಮೋನೋಕ್ರೊಟೊಫಾಸ್ 36 ಎಸ್.ಸಿ ಯನ್ನು 1.5 ಮಿ.ಲೀ ನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಅಥವಾ ಬೇವಿನ ಎಣ್ಣೆ (ಅಜಾಡಿರೆಕ್ಟಿನ್ 1000 ಪಿ.ಪಿ.ಎಂ) ಅನ್ನು ಪ್ರತಿ ಲೀಟರ್ ನೀರಿಗೆ 2 ಮಿ.ಲೀ ನಂತೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಅಥವಾ 300 ಪಿ.ಪಿ.ಎಂ ಪ್ರತಿ ಲೀಟರ್ ನೀರಿಗೆ 4-5 ಮಿ.ಲೀ ನಂತೆ ಬೆರಸಿ ಗರಿಗಳ ಮೇಲೆ ಸಿಂಪಡಿಸುವುದು ಸೂಕ್ತ. ಸಿಂಪರಣೆ ಕೈಗೊಳ್ಳವಾಗ ಸಿಂಪರಣೆ ದ್ರಾವಣಕ್ಕೆ ಪ್ರತಿ ಲೀ ನೀರಿಗೆ 0.5 ಮಿ.ಲೀ ಅಂಟು ದ್ರಾವಣವನ್ನು ಸೇರಿಸುವುದು ಸೂಕ್ತ. |

## ಜಾನುವಾರು ಸಲಹೆ:

| | |
|---|---|
| ಹಸು (ಸಾಮಾನ್ಯ ಸಲಹೆ) | ➢ ಜಾನುವಾರಗಳಲ್ಲಿ ಕಾಲುಬಾಯಿರೋಗ ನಿಯಂತ್ರಿಸಲು ಲಸಿಕೆ ಕೊಡಿಸಲು ಸಮಯ ಸೂಕ್ತವಾಗಿದೆ.<br>➢ ದನದ ಕೊಟ್ಟಿಗೆಯನ್ನು ಶುಚಿಯಾಗಿ ಇಡುವುದರಿಂದ ಜಾನುವಾರಗಳಲ್ಲಿ ಕಾಲುಬಾಯಿ ರೋಗವನ್ನು ತಡೆಗಟ್ಟಬಹುದು.<br>➢ ಮಳೆಗಾಲವಾಗಿರುವುದರಿಂದ ಗುಡುಗು-ಸಿಡಿಲು ಬರುವ ಸಂಭವವಿರುವುದರಿಂದ ಜಾನುವರುಗಳನ್ನು ವಿದ್ಯುತ್ ಕಂಬದ ಕೆಳಗೆ, ತೆರೆದ ಪ್ರದೇಶಗಳಲ್ಲಿ ಹಾಗೂ ಮರದ ಕೆಳಗೆ ಕಟ್ಟಿಹಾಕದೆ ಕೊಟ್ಟಿಗೆಯಲ್ಲಿ ಕಟ್ಟುವುದು ಸೂಕ್ತ.<br>➢ ಧೀರ್ಘಕಾಲಿಕ ಮೇವಿನ ಬೆಳೆಗಳನ್ನು ನಾಟಿ ಮಾಡಲು ಸೂಕ್ತ ಸಮಸಯವಾಗಿದೆ<br>➢ ಜಾನುವಾರುಗಳಿಗೆ ಆಹಾರದ ಜೊತೆಗೆ ಪೂರಕವಾದ ಪೌಷ್ಟಿಕ ಆಹಾರವನ್ನು ನೀಡುವುದು ಸೂಕ್ತ<br>➢ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಜಾನುವಾರುಗಳಿಗೆ ಹೆಚ್ಚು ಕುಡಿಯುವ ನೀರನ್ನು ಒದಗಿಸುವುದು ಸೂಕ್ತವಾಗಿದೆ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.